**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು. ದಿಃ 01.06.2022.**

**<u>ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಎನ್ ಕೆ ವಕೀಲರಿಂದಃ</u>**

1. ನನ್ನ ತಂದೆ ಲೋಕಪ್ಪ ರವರರಿಗೆ 5 ಜನ ಹೆಣ್ಣು ಮಕ್ಕಳು ಮತ್ತು 2 ಜನ ಗಂಡು ಮಕ್ಕಳು. ಸದರಿ 2 ಜನ ಗಂಡು ಮಕ್ಕಳು ಮೃತಪಟ್ಟಿರುತ್ತಾರೆ. ಮೃತ ಪಟ್ಟ ನನ್ನ ಸಹೋದರರಿಗೆ ಹಂಡತಿ ಇರುತ್ತಾರೆ. ನನ್ನ ತಂದೆ ಲೋಕಪ್ಪ ರವರ ತಂದೆ ಹೆಸರು ಹಾಲಪ್ಪ. ನನ್ನ ತಂದೆಗೆ ನನ್ನ ತಾತನಿಂದ ಬಂದಿರುವಂತಹ ಜಮೀನು ಮತ್ತು ಮನೆ ಆಸ್ತಿಗಳು ಇರುತ್ತದೆ ಎಂದರೆ ನಿಜ. ದಾವಾ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು. ದಾವಾ ಸ್ವತ್ತು ನನ್ನ ತಂದೆಯವರಿಗೆ ವ್ಯವಸ್ಥಾ ಪತ್ರದ ಮೂಲಕ ಬಂದಿರುತ್ತದೆ. ವೀರಭದ್ರಪ್ಪ ರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ವೀರಭದ್ರಪ್ಪ ರವರಿಗೆ ವೀರಬಸಪ್ಪ ಎಂಬುವವರು ಮಾತ್ರ ಸಹೋದರರು ಇರುತ್ತಾರೆ. ವೀರಬಸಪ್ಪ ರವರಿಗೆ ಒಬ್ಬಳು ಹೆಣ್ಣು ಮಗಳು ಇರುತ್ತಾರೆ. ಸದರಿ ವೀರಬಸಪ್ಪ ರವರ ಮಗಳು ಪ್ರತಿವಾದಿಯಾಗಿರುತ್ತಾರೆ.

2. ದಾವಾ ಸ್ವತ್ತಿನ ಖಾತೆ ಮತ್ತು ಅನುಭವ ವೀರಭದ್ರಪ್ಪ ರವರು ಮಾಡುತ್ತಾರೆ ಎಂದರೆ ಖಾತೆ ವೀರಭದ್ರಪ್ಪ ರವರ ಹೆಸರಿಗಿದ್ದು, ಅನುಭವದಲ್ಲಿ ನಾವೇ ಇರುತ್ತೇವೆ. ನನ್ನ ಹಾಗೂ ಪ್ರತಿವಾದಿಯ ನಡುವೆ ದಾವಾ ಸ್ವತ್ತಿನ ಬೆಗ್ಗ ಗಲಾಟೆಯಾಗಿದ್ದು ಆ ಕಾರಣ ಪೋಲೀಸರು ಗಲಾಟಾ ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸದರಿ ಗಲಾಟೆಯು ನಮ್ಮ ವೈಯಕ್ತಿಕ ವಿಚಾರದ ಬಗ್ಗೆಯಾಗಿದ್ದು ದಾವಾ ಸ್ವತ್ತಿನ ಬಗ್ಗೆಯಾಗಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ನಾನು ಮನೆ ನಿರ್ಮಾಣ ಮಾಡುವ ವಿಚಾರವಾಗಿ ನನಗೂ ಹಾಗೂ ಪ್ರತಿವಾದಿಯ ಗಂಡ ಶಿವನ ಗೌಡ ರವರಿಗೆ ಗಲಾಟೆಯಾಗಿ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸದರಿ ಗಲಾಟೆಯು ವೈಯಕ್ತಿಕ ವಿಚಾರದ ಬಗ್ಗೆಯಾದ ಗಲಾಟೆಯಾಗಿರುತ್ತದೆ.

3. ದಾವಾ ಸ್ವತ್ತಿನಲ್ಲಿ ಪ್ರತಿವಾದಿ ಮತ್ತು ಅವರ ಗಂಡ ಹುಲ್ಲಿನ ಬವಣೆ ಹಾಕಿಕೊಂಡು ಸ್ವಾಧೀನ ಹೊಂದಿ ವಾಸವಾಗಿರುತ್ತಾರೆ ಎಂದರೆ ಸುಳ್ಳು. ವೀರಭದ್ರಪ್ಪ ಮತ್ತು ವೀರಬಸಪ್ಪ ರವರ ಮಧ್ಯ ಆದ ವಿಭಾಗದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ 2 ರಲ್ಲಿ

ದಾವಾ ಸ್ವತ್ತಿನ ಬಗ್ಗೆ ವಿವರಣೆ ಇರುತ್ತದೆ. ವೀರಭದ್ರಪ್ಪ ಎಂಬುವವರು ನಮ್ಮ ತಂದೆಗೆ ದಾವಾ ಸ್ವತ್ತಿನ ಬಗ್ಗೆ ವ್ಯವಸ್ಥಾ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸುಳ್ಳು.

4. ನಾನು ನನ್ನ ತಂದೆ ಬದುಕಿರುವ ಕಾಲಕ್ಕೆ ಸದರಿ ವ್ಯಾವಸ್ಥಾ ಪತ್ರದ ಆಧಾರದ ಮೇಲೆ ನನ್ನ ತಂದೆ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಡುವಂತೆ ಅರ್ಜಿ ಸಲ್ಲಿಸಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನ್ನ ತಂದೆಯವರು ಜೀವಂತ ಇದ್ದ ಕಾಲಕ್ಕೆ ಸದರಿಯವರು ಅರ್ಜಿ ಸಲ್ಲಿಸಿದ್ದು ಅವರು ಮೃತಪಟ್ಟ ನಂತರ ನಾನು ಅರ್ಜಿ ಸಲ್ಲಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನನಗೆ ಅರ್ಜಿಯ ಯತಾ ನಕಲು ಮತ್ತು ಅದರೊಂದಿಗೆ ಒಂದು ನಕಲು ಪ್ರತಿ ತೋರಿಸಲಾಯಿತು. ಸದರಿ ಅರ್ಜಿಯು ನಾನು ಸಲ್ಲಿಸಿದ ಅರ್ಜಿ ಮತ್ತು ಅದರೊಂದಿಗೆ ಲಗತ್ತಿಸಿದ ವಂಶವೃಕ್ಷವಾಗಿರುತ್ತದೆ. ಅದ್ದರಿಂದ ಸದರಿ ದಾಖಲೆಗಳನ್ನು ಕ್ರಮವಾಗಿ **ನಿಡಿ 1 ಮತ್ತು ನಿಡಿ 2** ಎಂದು ಗುರುತಿಸಲಾಯಿತು. ನಿಡಿ1 ರ ಮೇರೆಗೆ ಖಾತೆ ಬದಲಾವಣೆಯಾಗಿರುವುದಿಲ್ಲ ಕಾರಣ ಪ್ರತಿವಾದಿ ತಕರಾರು ಮಾಡಿರುತ್ತಾರೆ.

5. ನಾನು ಸದರಿ ಖಾತೆ ಬದಲಾವಣೆ ಯಾಗದಿರುವ ಬಗ್ಗೆ ಮೆಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ನಾನು ಮುಂದುವರೆದು ಹೇಳುವುದೇನೆಂದರೆ ನ್ಯಾಯಾಲಯಕ್ಕೆ ದಾವೆ ಸಲ್ಲಿಸಿರುತ್ತೇನೆ. ನಿಪಿ 19 ರಲ್ಲಿ ಕಾಣುವ ವ್ಯಾಜ್ಯ ದಲ್ಲಿ ಪ್ರತಿವಾದಿ ಪಕ್ಷಕಾರರಾಗಿರುವುದಿಲ್ಲ ಎಂದರೆ ನಿಜ. ವೀರಭದ್ರಪ್ಪ ಎಂಬುವವರಿಗೆ ಮದುವೆಯಾಗಿರುವುದಿಲ್ಲ. ನನ್ನ ತಂದೆಯವರನ್ನು ವೀರಭದ್ರಪ್ಪ ರವರು ದತ್ತು ಪಡೆದಿದ್ದರು. ವೀರಭದ್ರಪ್ಪ ಎಂಬುವವರಿಗೆ ಗದಿಗೆಮ್ಮ ಎಂಬ ಮಗಳು ಇದ್ದರು ಎಂದರೆ ಸುಳ್ಳು. ಗದಿಗೆಮ್ಮ ಎಂಬುವವರನ್ನು ಹಿರೆಮಾಗಡಿ ಗ್ರಾಮದ ಶಿವಲಿಂಗಪ್ಪ ಎಂಬುವವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಗದಿಗೆಮ್ಮ ಮೃತಪಟ್ಟ ನಂತರ ಅವರ ಮಕ್ಕಳು ಹಿರೇಮಾಗಡಿ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

6. ನಾನು ಹಾಗೂ ನನ್ನ ತಂದೆ ವೀರಭದ್ರಪ್ಪರವರ ಜಮೀನನ್ನು ಪಡೆಯಬೇಕು ಎಂಬ ಕಾರಣಕ್ಕೆ ದಾಖಲೆ ಮತ್ತು ಅರ್ಜಿಗಳನ್ನು ಸೃಷ್ಟಿಪಡಿಸಿರುತ್ತೇವೆ ಎಂದರೆ ಸುಳ್ಳು.

ಸದರಿ ಗದಿಗೆಮ್ಮ ರವರು ನನ್ನ ತಂದೆಯವರ ಕೆಲವು ಆಸ್ತಿಗಳಿಂದ ಹೊರಗೆ ಹಾಕಿ ವ್ಯವಸಾಯ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವೀರಭದ್ರಪ್ಪರವರಿಗೆ ಮದುವೆಯಾಗಿ ಮಕ್ಕಳಿದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

7. ದಾವಾ ಸ್ವತ್ತು ವೀರಭದ್ರಪ್ಪರವರಿಗಾಗಲೀ ಅಥವಾ ನನ್ನ ತಂದೆ ಲೋಕಪ್ಪ ರವರಿಗಾಗಲೀ ಸೇರಿದ ಸ್ವತ್ತಾಗಿರುವುದಿಲ್ಲ ಎಂದರೆ ಸುಳ್ಳು. ದಾವಾ ಸ್ವತ್ತು ಪ್ರತಿವಾದಿಯ ತಂದೆ ವೀರಬಸಪ್ಪ ರವರಿಗೆ ಸೇರಿದ ಸ್ವತ್ತಾಗಿರುತ್ತದೆ ಎಂದರೆ ಸುಳ್ಳು. ದಾವಾ ಸ್ವತ್ತಿನಲ್ಲಿ ಪ್ರತಿವಾದಿ ಕೊಟ್ಟಿಗೆ ಬಣವೆ, ಹುಲ್ಲಿನ ಬಣವೆ ಮತ್ತು ಮನೆ ಕಟ್ಟಿ ವಾಸವಾಗಿರುತ್ತಾರೆ ಎಂದರೆ ಸುಳ್ಳು.

**ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದ ರೀತ್ಯಾ ಕಂಪ್ಯೂಟರೀಕರಿ ಸಲಾಯ್ತು).**

**ಓದಿ, ಹೇಳಿ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.**

**ಸಿವಿಲ್ ನ್ಯಾಂ ಮತ್ತು ಜೆ ಎಂ ಎಫ್ ಸಿಃ ಸೊರಬ**